12. ಮೃತ ಮಾಜಿ ಸೈನಿಕರ ವಾರಸುದಾರರಿಗೆ ಮರಣೋತ್ತರ ಪರಿಹಾರಧನ ವಿತರಣೆ.

13. ಪಿಂಚಣಿ ರಹಿತಮಾಜಿ ಸೈನಿಕರು ಮತ್ತು ವಿಧವೆಯರಿಗೆ ವಾರ್ಷಿಕ ಪರಿಹಾರಧನ ವಿತರಣೆ.

14. ಸ್ಥಳಿಯ ಧನ ಸಹಾಯ ಮತ್ತು ವೈದ್ಯಕೀಯ ಖರ್ಚನ್ನು ಮರು ಪಾವತಿಸುವುದು.

15. ಮಾಜಿ ಸೈನಿಕರಿಗೆ: ವಿಧವೆಯರಿಗೆ ಸ್ವಉದ್ಯೋಗಕ್ಕಾಗಿ ತರಭೇತಿ ಶಿಬಿರ ಏರ್ಪಡಿಸುವುದು.

16. ಸಿ.ಎಸ್.ಡಿ. ಕ್ಯಾಂಟೀನು ಸೌಲಭ್ಯ ಒದಗಿಸುವುದು.

17. ಸ್ವಉದ್ಯೋಗ ಕೈಗೊಳ್ಳಲು ಮಾಜಿ ಸೈನಿಕರಿಗೆ ಮಾರ್ಗದರ್ಶನ ನೀಡುವುದು.

ರಾಜ್ಯದಲ್ಲಿರುವ ಗೋವಾ ಸ್ವಾತಂತ್ಯ ಹೋರಾಟಗಾರರಿಗೆ ಪಿಂಚಣಿ

1898 (1682) ಶ್ರೀ ಜಗದೀಶ್ವ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಇರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಆ. ಇವರುಗಳಲ್ಲಿ ಎಷ್ಟು ಜನರಿಗೆ ಪಿಂಚಣಿ ನೀಡಲಾಗುತ್ತಿದೆ, ಇನ್ನುಳಿದವರಿಗೆ ಪಿಂಚಣಿಯನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ. ಬಂದಿದ್ದರೆ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಎಷ್ಟು ದಿನದಲ್ಲಿ ಪಿಂಚಣಿಯನ್ನು ಮಂಜೂರು ಮಾಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ದಿನಾಂಕ: 19.4.95ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 4264 ಪಿಪಿಜಿ 92ರಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವಧನ ನೀಡುವ ಯೋಜನೆಯನ್ನು ಹಿಂತೆಗೆದುಕೊಂಡಿರುವುದರಿಂದ ಅವರ ಸಂಖ್ಯೆಯಾಗಲಿ ಅಥವಾ ಜಿಲ್ಲಾವಾರು ಮಾಹಿತಿ ಸರ್ಕಾರದಲ್ಲಿ ಲಭ್ಯವಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಾಣಿಜ್ಯತೆರಿಗೆ ಮತ್ತು ಮಾರಾಟ ತೆರಿಗೆ ವಸೂಲಿ

1900 (1684) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2002-03ನೆ ಸಾಲಿನಲ್ಲಿ ವಾಣಿಜ್ಯ ತೆರಿಗೆ ಮತ್ತು ಮಾರಾಟ ತೆರಿಗೆಯಿಂದ ವಸೂಲಾದ ಹಣ ಎಷ್ಟು;

ಆ. ಬಾಕಿ ವಸೂಲಾಗಬೇಕಾಗಿರುವ ಮೊತ್ತವೆಷ್ಟು, ಬಾಕಿ ವಸೂಲಾತಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. 2002-03ನೆ ಸಾಲಿನಲ್ಲಿ ಫೆಬ್ರವರಿ 2003ರ ಅಂತ್ಯಕ್ಕೆ ವಾಣಿಜ್ಯ ತೆರಿಗೆ ಮತ್ತು ಮಾರಾಟ

ತೆರಿಗೆಯಿಂದ ವಸೂಲಾದ ಹಣ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಕಾಯ್ದೆಗಳು	ಸಂಗ್ರಹಣೆ
ಮಾರಾಟ ತೆರಿಗೆ	4399.98
ಮನರಂಜನಾ ತೆರಿಗೆ	35.15
ಕೃಷಿ ವರಮಾನ ತೆರಿಗೆ	1.47
ವೃತ್ತಿ ತೆರಿಗೆ	143.12
ವೈಭವ ತೆರಿಗೆ	71.86
ಪ್ರವೇಶ ತೆರಿಗೆ	430.84
ಜೂಜು ತೆರಿಗೆ	11.07
ಐ.ಡಿ. ಸೆಸ್	9.43
ಒಟ್ಟು	5102.92

ಆ. ಡಿಸೆಂಬರ್ 2002ರ ಅಂತ್ಯದ ವೇಳೆಗೆ ಇಲಾಖೆಯಲ್ಲಿ ವಾಣಿಜ್ಯ ತೆರಿಗೆಗಳು ಬಾಕಿ ರೂ. 1927.54 ಕೋಟಿಗಳಿದ್ದು ಪ್ರಸ್ತುತ ಸಾಲಿನಲ್ಲಿ ಬಾಕಿ ಇರುವ ತೆರಿಗೆ ವಸೂಲಿ ಮಾಡಲು ಅಗತ್ಯವಿರುವ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

(ರೂ. ಕೋಟಿಗಳಲ್ಲಿ)

1.	ನ್ಯಾಯಾಲಯದಲ್ಲಿನ ತಡೆಯಾಜ್ಞೆಗಳ ಪ್ರಕರಣಗಳಲ್ಲಿನ ಬಾಕಿ	404.37
2.	ತೆರಿಗೆ ಮನ್ನಾ ಮಾಡುವಿಕೆಯ ಪ್ರಕರಣಗಳಲ್ಲಿನ ಬಾಕಿ	21.27
3.	ತೆರಿಗೆ ಪಾವತಿ ಮುಂದೂಡಿಕೆಯ ಪ್ರಕರಣಗಳಲ್ಲಿನ ಬಾಕಿ	531.33
4.	ಬಿ.ಐ.ಎಫ್.ಆರ್. ಪ್ರಕರಣಗಳಲ್ಲಿನ ಬಾಕಿ	106.99
5.	ತೆರಿಗೆ ಪಾವತಿ ಹಾಗೂ ಹೊಂದಾಣಿಕೆ ಮಾಡಬೇಕಾಗಿರುವಂತಾದ್ದು.	37.88
6.	ಕಲಂ 13(3) (ಎ) ಭೂಕಂದಾಯ ಮುಖಾಂತರ.	71.59
7.	ಕಲಂ 13(3)(ಎಎ) ಇಲಾಖಾ ವಸೂಲಾತಿ ಮುಖಾಂತರ	206.39
8.	ಕಲಂ 13(3)(ಬಿ) ನ್ಯಾಯಾಲಯಗಳ ಮುಖಾಂತರ	345.08
9.	ಕಲಂ 14 ಬ್ಯಾಂಕ್ ಖಾತೆಯ ಮುಟ್ಟು ಗೋಲು ಕ್ರಮ.	16.26

10. ಬಡ್ಡಿ ರಹಿತ ಸಾಲ, ಕಂತುಗಳಲ್ಲಿ ನೀಡುವ ಸೌಲಭ್ಯ 186.39
ಉತ್ತೇಜನ ಯೋಜನೆಗಳು ಮತ್ತು ವಹಿವಾಟು ದಿವಾಳಿ.

ಒಟ್ಟು 1927.54

ಅಂಗವಿಕಲರಿಗೆ ಸರ್ಕಾರಿ ಹುದ್ದೆ

1901 (1685) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ಸರ್ಕಾರಿ ಸೇವೆಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಗ್ರೂಪಿ 'ಸಿ' ಮತ್ತು ಗ್ರೂಪ್ 'ಡಿ' ವರ್ಗದ ಹುದ್ದೆಗಳ ನೇಮಕಾತಿಗೆ ಯಾವ ಪ್ರಮಾಣದ ಮೀಸಲಾತಿ ನೀಡಲಾಗಿದೆ;

ಆ. ನೀಡಿದ್ದಲ್ಲಿ, ಎಷ್ಟು ಜನ ಅಂಗವಿಕಲ ವ್ಯಕ್ತಿಗಳು ಸರ್ಕಾರಿ ಸೇವೆಗಳಿಗೆ ನೇಮಕ ಹೊಂದಿದ್ದಾರೆ. ಸರ್ಕಾರಿ ನೌಕರರ ಒಟ್ಟು ಸಂಖ್ಯೆಗೆ ಅನುಗುಣವಾಗಿ ಅಂಗವಿಕಲ ವ್ಯಕ್ತಿಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ;

ಇ. ನೀಡಿರದಿದ್ದರೆ, ಕಡಿಮೆ ನೇಮಕವಾಗಿರುವ ಹುದ್ದೆಗಳಿಗೆ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರ ಮಾದರಿಯಲ್ಲಿ ಬ್ಯಾಕ್‌ಲಾಗ್ ಮೂಲಕ ಅಂಗವಿಕಲ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳದಿರಲು ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ರಾಜ್ಯ ಸರ್ಕಾರಿ ಸೇವೆಯಲ್ಲಿ ಗ್ರೂಪಿ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡಾ 5 ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ.

ಆ. ಒಟ್ಟು 7210 ಅಂಗವಿಕಲ ವ್ಯಕ್ತಿಗಳು ನೇಮಕವಾಗಿದ್ದಾರೆ. ಸರ್ಕಾರಿ ನೌಕರರ ಸಂಖ್ಯೆಗನುಗುಣವಾಗಿ ಅಂಗವಿಕಲ ವ್ಯಕ್ತಿಗಳಿಗೆ ಪ್ರಾತಿನಿಧ್ಯ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇ. ಅಂಗವಿಕಲ ಅಭ್ಯರ್ಥಿಗಳಿಗೆ ಕಲ್ಪಿಸಿರುವ ಮೀಸಲಾತಿ ಸೌಲಭ್ಯ, ಸಮತಳ ಮೀಸಲಾತಿಯಾಗಿದೆ. ಆದ್ದರಿಂದ, ಬ್ಯಾಕ್‌ಲಾಗ್ ತತ್ವವನ್ನು ಇಲ್ಲಿ ಅನ್ವಯಿಸುವುದು ಕಾರ್ಯ ಸಾಧ್ಯವಾಗಿರುವುದಿಲ್ಲ.

ರಾಜ್ಯದಲ್ಲಿನ ಅಂಗವಿಕಲ ನೌಕರರಿಗೆ ಬಡ್ತಿ ಮಿಸಲಾತಿ

1902 (1686) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೇಂದ್ರ ಸರ್ಕಾರವು ಅಂಗವಿಕಲ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ಜಾರಿಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದರೆ, ರಾಜ್ಯ ಸರ್ಕಾರದಲ್ಲಿನ ಅಂಗವಿಕಲ ಸರ್ಕಾರಿ ನೌಕರರಿಗೆ ಈ ಸೌಲಭ್ಯವನ್ನು ಎಂದಿನಿಂದ ನೀಡಲಾಗುವುದು.

ಇ. ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?